Indian Journal of History and Archaeology

ISSN (E): 2582-225X
Vol-1 Issue 2, July-August 2019. 1-6



# ಮಂಡ್ಯ ತಾಲೂಕಿನ ಶಾಸನಗಳಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳು

ಡಾ.ಮೋಹನ.ಹೆಚ್.ಎಂ.

"ಸಕ್ಕರೆಯ ಸೀಮೆ" ಎಂಬ ನಾಮಾಂಕಿತಕ್ಕೆ ಹೆಸರುವಾಸಿಯಾದ ಮಂಡ್ಯ ಜಿಲ್ಲೆಯು ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿ ಒಂದಾಗಿದ್ದು ಚಾರಿತ್ರಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸಮೃದ್ಧಿಯನ್ನು ಪಡೆದಿದೆ.[1] ಹೀಗಿರುವಾಗ ಆಡಳಿತಾತ್ಮಕವಾಗಿ ಈ ಪ್ರದೇಶವನ್ನು ಸಂಶೋಧನಾ ಅಧ್ಯಯನಕ್ಕೆ ಒಳಪಡಿಸಿದಾಗ ಇತಿಹಾಸದ ಅಧ್ಯಯನ ಸಾಮಾಗ್ರಿಗಳಾದ ಶಾಸನಗಳು, ನಾಣ್ಯಗಳು, ಅವಶೇಷಗಳು ಮತ್ತು ಸ್ಮಾರಕಗಳ ಲಭ್ಯತೆಯಿಂದ ಇದರ ರಾಜಕೀಯ ಇತಿಹಾಸವನ್ನು ಅರಿಯಲು ಸಹಾಯಕ ಅಂಶಗಳಾಗಿ ತಮ್ಮ ಪ್ರಭಾವವನ್ನು ಬೀರಿವೆ. ಹೀಗಾಗಿ ಈ ಜಿಲ್ಲೆಯನ್ನು ಸಕ್ಕರೆ ಸೀಮೆ ಮತ್ತು ಭತ್ತದ ಕಣಜವೆಂತಲೂ ಕರೆಯುತ್ತಾರೆ.[2] ಶಾಸನಗಳಲ್ಲಿರುವ ವಿಷಯಗಳು ಬಹಳ ವೈವಿಧ್ಯಮಯವಾದ ಅಂಶಗಳನ್ನು ಹೊರಗೆಡುವುತ್ತವೆ. ಇವುಗಳು ಅವರ ಆಳ್ವಿಕೆಯ ಜೊತೆಗೆ ವ್ಯಾಪಾರ, ವ್ಯವಹಾರ, ವ್ಯಾಪಾರಿ ಸಂಘಗಳು, ಅವುಗಳ ಪ್ರಾಬಲ್ಯ, ಸುಂಕ, ಸಾರಿಗೆಗಳು, ಭೂಸಾಮ್ಯ, ವೃತ್ತಿಪದ್ಧತಿಗಳು, ಆರ್ಥಿಕ ಸ್ಥಿತಿಗತಿ, ಧರ್ಮಗಳ ನಡುವೆ ಇದ್ದ ಸೌಹಾರ್ದ ವೈಷಮ್ಯಗಳು, ದೇವಾಲಯ, ಬಸದಿ,

[1] ಪಾರ್ಥಸಾರಥಿ, ಟಿ.ಎ., ಮಂಡ್ಯ ಜಿಲ್ಲಾ ಗೆಜ಼ೆಟಿಯರ್ (ಪರಿಷ್ಕೃತ ಆವೃತಿ), ಬೆಂಗಳೂರು, 2003,

[2] ಅನಂತರಾಮು, ಕೆ– ಸಕ್ಕರೆಯ ಸೀಮೆ (ಮಂಡ್ಯ ಜಿಲ್ಲೆಯ ಪ್ರವಾಸ ಕಥನ) ಮೈಸೂರು, 1983

ಮಠಗಳು, ಪೂಜೆ ಪುನಸ್ಕಾರಗಳು, ಸಾಮಾಜಿಕ ರೀತಿ ನೀತಿಗಳು ಕುಲಕಸುಬು, ಧಾರ್ಮಿಕ ವಿಧಿಗಳು, ಸಂಸ್ಕೃತಿ ಹೀಗೆ ಹಲವಾರು ವಿಷಯಗಳ ಮೇಲೆ ಬೆಳಕು ಚೆಲ್ಲಿವೆ.[3]

ಕೆರೆಕಟ್ಟೆಗಳನ್ನು ತೋಡಿಸುವುದು, ದೇಗುಲಗಳನ್ನು ನಿರ್ಮಿಸುವುದು ಹಾಗೂ ಅವುಗಳ ಜೀರ್ಣೊದ್ಧಾರ ಮಾಡುವುದು ಪುಣ್ಯದ ಕೆಲಸವೆಂಬ ಭಾವನೆ ಎಲ್ಲರಲ್ಲಿಯೂ ಮೂಡಿತ್ತು. ಹೀಗೆ ನಿರ್ಮಾಣಗೊಂಡ ಕೆರೆಗಳು ರಾಜನ ಹೆಸರಿನಲ್ಲೋ ಅಥವಾ ಅವರ ತಂದೆ ತಾಯಿಯ ಹೆಸರಿನಲ್ಲೋ ಕಟ್ಟಿಸುತ್ತಿದ್ದುದು ಸಾಮಾನ್ಯವಾಗಿದೆ. [4] ಈ ಭಾಗದಲ್ಲಿ ಕೆರ, ಕೊಳ, ಕಟ್ಟೆ ಮುಂತಾದ ಹೆಸರುಗಳಿಂದ ಕೊನೆಗೊಳ್ಳುವ ಗ್ರಾಮಗಳನ್ನು ಹೊರತು ಪಡಿಸಿಯೂ ಇಲ್ಲಿ ಹಲವಾರು ಶಾಸನಗಳು ಕೆರೆಕಟ್ಟೆಗಳನ್ನು ಉಲ್ಲೇಖಿಸುತ್ತವೆ. [5] ಕ್ರಿ.ಶ. 1847ರ [6] ಆಮೀಲ ಕಾಶ್ಯಪಗೋತ್ರದ ತಿರುಕುಡಿ ಶ್ರೀನಿವಾಸರವರು ಮಂಡ್ಯದಲ್ಲಿ "ಪ್ರಾಣದೇವರ ದೇವಸ್ಥಾನ ಸರೋವರ ಜನಗಳಿಗೆ ಉಪಯೋಗಕ್ಕಾಗಿ' ಕಟ್ಟಿಸಿದ್ದಾರೆ. ಹೀಗೆಯೆ ಕೆರೆಗಳನ್ನು ಕಟ್ಟಿಸಿದವರಿಗೆ ಇತರರು ದಾನ ನೀಡಿದ ನಿದರ್ಶನಗಳು ನಮಗೆ ಕಂಡುಬರುತ್ತವೆ. ಕೆರೆಗಳ ಜೊತೆಜೊತೆಗೆ ಸೇತುವೆಯನ್ನು ಕಟ್ಟಿರುವ ಉಲ್ಲೇಖಗಳು ಸಹ ದೊರೆತಿವೆ. ಕ್ರಿ.ಶ.713ರ [7] ಶಾಸನವೊಂದರಲ್ಲಿ ಕೆರೆಗೋಡಿಗೆ ಉತ್ತರದಲ್ಲಿದ್ದ ಕಿಳಿನೀ ನದಿಗೆ ಸೇತುವೆ ಕಟ್ಟಿದುದು ಅತ್ಯಂತ ಪ್ರಾಚೀನ ಉಲ್ಲೇಖವಾಗಿದೆ.

ಜೈನಧರ್ಮಕ್ಕೆ ರಾಜಾಶ್ರಯ-ಜನಾಶ್ರಯ ಲಭಿಸಿತ್ತು. ಲೋಕತಿಲಕ ಜಿನಾಲಯದ ಬಗ್ಗೆ ಈ ಹಿಂದೆಯೇ ಉಲ್ಲೇಖಿಸಿದೆ. ಕ್ರಿ.ಶ.916-17ರಲ್ಲಿ [8] ಮಣಲೆಯಾರ ಕನಕಗಿರಿಯಲ್ಲಿ ಬಸದಿಯನ್ನು ಕಟ್ಟಿಸಿದ ಉಲ್ಲೇಖವಿದೆ.ಕೋಟೆ ಕಟ್ಟಿದ ಉದಾಹರಣೆಗಳು ಸಹ ಇವೆ. ಕ್ರಿ.ಶ.1633ರಲ್ಲಿ[9] ಮುತ್ತಗೆರೆಯಲ್ಲಿ ನಳಮಾರ ಮತ್ತು ಇತರರು ಕಾಡುಕಡಿದು ಬಯಲು ಮಾಡಿ ಕೋಟೆಯನ್ನು ಕಟ್ಟಿಸಿದರು ಎಂದು ಮುತ್ತಗೆರೆಯ ಶಾಸನವು ಉಲ್ಲೇಖಿಸುತ್ತದೆ. ಆದರೆ ಪ್ರಸ್ತುತವಾಗಿ ಈ ಭಾಗದಲ್ಲಿ ಯಾವುದೇ ಕೋಟೆಗಳಿಲ್ಲ ಬಹುಶಃ ಈ ಕೋಟೆಯು ಸಂಪೂರ್ಣವಾಗಿ ಭಗ್ನವಾಗಿದೆ.

ಹಲವು ವರ್ಷಗಳ ಇತಿಹಾಸವನ್ನು ಹೊಂದಿರುವ ಈ ಪ್ರಾಂತ್ಯಗಳಲ್ಲಿ ಅನೇಕ ಅಗ್ರಹಾರಗಳು ಸ್ಥಾಪನೆಯಾದವು. ಕ್ರಿ.ಶ.713ರಲ್ಲಿ ಕೇರೆಗೋಡಿಗೆ ಉತ್ತರವಿದ್ದ ಪಲ್ಲವ ತಟಾಕ ಎಂಬ ಅಗ್ರಹಾರವನ್ನು ಸ್ಥಾಪನೆ ಮಾಡಲಾಯಿತು. ಈ ಅಗ್ರಹಾರ ಈ ಪ್ರಾಂತ್ಯದ ಅತಿ

---

[3] ಗೋಪಾಲ್, ಆರ್.(ಸಂ)- ಮಂಡ್ಯ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಮೈಸೂರು, 2008
[4] ದೇ.ಜ.ಗೌ (ಸಂ)- ಸುವರ್ಣ ಮಂಡ್ಯ, ಮಂಡ್ಯ, 1994 ಮಂಡ್ಯ ಜಿಲ್ಲೆಯ ಸಿರಿಯೊಡಲು, 1994
[5] ಚಿದಾನಂದ ಮೂರ್ತಿ ಎಂ.- ಕನ್ನಡ ಶಾಸನಗಳ ಸಾಂಸಕೃತಿಕ ಅಧ್ಯಯನ, ಬೆಂಗಳೂರು -2002
[6] ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-7, ಶಾಸನ ಸಂಖ್ಯೆ-1, ಪುಟ ಸಂಖ್ಯೆ-186
[7] ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-7, ಶಾಸನ ಸಂಖ್ಯೆ-35, ಪುಟ ಸಂಖ್ಯೆ-219
[8] ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-7, ಶಾಸನ ಸಂಖ್ಯೆ-100, ಪುಟ ಸಂಖ್ಯೆ-239
[9] ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-7, ಶಾಸನ ಸಂಖ್ಯೆ-28, ಪುಟ ಸಂಖ್ಯೆ-269

ಪ್ರಾಚೀನವಾದ ಅಗ್ರಹಾರವೆನ್ನಬಹುದು. ಈ ಭಾಗದಲ್ಲಿ ಹಲವಾರು ಹಳ್ಳಿಗಳು ಹೊಸ ಹೊಸ ಹೆಸರುಗಳನ್ನು ಧರಿಸಿ ಅಗ್ರಹಾರಗಳಾಗಿರುವ ಉಲ್ಲೇಖಗಳು ಸಹ ಕಂಡುಬರುತ್ತವೆ, ಅವುಗಳಲ್ಲಿ ಪ್ರಮುಖವಾದುವೆಂದರೆ ಮದ್ದೂರಿಗೆ ನಾರಸಿಂಹ ಚತುರ್ವೇದಿ ಮಂಗಲ, ಬೆಳ್ಳೂರಿಗೆ ಉದ್ಭವನಾರಸಿಂಹಪುರ, ಗುತ್ತಲಿಗೆ ಮಲ್ಲಿಕಾರ್ಜುನಪುರ ಮತ್ತು ಯಾದವನಾರಾಯಣಪುರ, ಮಂಡ್ಯಕ್ಕೆ ಕೃಷ್ಣರಾಯಪುರ, ಮಾಧವ ಚೋಳಯನಹಳ್ಳಿಗೆ ದ್ಯಾವರಹಳ್ಳಿ, ದೊಡ್ಡಜಟಕಕ್ಕೆ ಚಿನ್ನಾದೇವಿಪುರ, ಕೌಡ್ಲೆಗೆ ದೇವರಾಜಪುರ ಮುತಾದವು, ಕ್ರಿ.ಶ.1276ರಲ್ಲಿಯೇ [10] ಮಂಡ್ಯವು ಶ್ರೀಮದಿನಾದಿಯಗ್ರಹಾರ ಮಂಡೆಯವಾಗಿತ್ತು ಈ ಊರಿನ ಉಲ್ಲೇಖ ನಮಗೆ ಕ್ರಿ.ಶ.1267ರಲ್ಲಿಯೇ ಕಂಡುಬರುತ್ತದೆ. ಹೀಗೆ ಬಹುಪಾಲು ಗ್ರಾಮಗಳು ಅಂದಿನ ಕಾಲದಲ್ಲಿಯೂ ಬೇರೆ ಹೆಸರನ್ನು ಹೊಂದಿರುತ್ತಿದ್ದವು.

ದೇವಾಲಯಗಳು ಅಂದಿನ ಕಾಲದ ಸಾಂಸ್ಕೃತಿಕ ಕೇಂದ್ರಗಳಾಗಿದ್ದವು ಇವುಗಳು ಧರ್ಮ ಭಾವನೆಯ ಜೊತೆಗೆ ಅನೇಕರಿಗೆ ಜೀವನೋಪಯ ಕಲ್ಪಿಸಿಕೊಟ್ಟಿರುವುದನ್ನು ಸಹ ಶಾಸನಗಳಲ್ಲಿ ಗಮನಿಸಬಹುದು. ಇಲ್ಲಿಯ ಕೆಲವು ಶಾಸನಗಳಲ್ಲಿ ದೇವರ ವಿವಿಧ ಬಗೆಯ ಪೂಜೆ ಸೇವೆಗಳಿಗೆ ಹಾಗೂ ದೇವಾಲಯದ ಸೇವೆಯಲ್ಲಿರುವವರಿಗೆ ಈ ದಾನದತ್ತಿಗಳು ಸಲ್ಲುತ್ತಿದ್ದವು, ಐಂದ್ರಪರ್ವ, ಪಂಚಿಕೇಶ್ವರ, ಆರಣಪೂಜೆ, ಚೈತ್ರಪವಿತ್ರ, ಧರ್ಮಕೃತಿಗಳ ಪಠಣ-ಪಾರಾಯಣ, ಬಾಲಶಿಕ್ಷೆ, ದೇವಾಲಯದ ಜೀರ್ಣೋದ್ಧಾರ ಮತ್ತು ವಿವಿಧ ಉತ್ಸವಗಳು, ಸತ್ರ ಮುಂತಾದವುಗಳಿಗಾಗಿ ದತ್ತಿಬಿಟ್ಟ ಉಲ್ಲೇಖಗಳಿವೆ.

ಕ್ರಿ.ಶ.1237ರ [11] ಬಸರಾಳಿನ ಶಾಸನದಲ್ಲಿ ದೇವಾಲಯದ ವಿವಿಧ ಉದ್ಯೋಗಿಗಳಿಗೆ ನೀಡುತ್ತಿದ್ದ ಸಂಬಾವನೆಯನ್ನು ಉಲ್ಲೇಖಸಲಾಗಿದೆ. ಈ ಗ್ರಾಮದ "ಸಿದ್ದಾಯದಿಂದ ನಡೆವ ನಿಯೋಗಿಗಳ ಜೀವಿತ ವರ್ಷಂಪ್ರತಿ ಪೂಜಾರಿಗಳಿರ್ವ್ವರಿಗಂ ಗದ್ಯಾಣ 8, ಪರಿಚಾರಕಂಗೆ ಗದ್ಯಾಣ 3, ಬಾಣಸಿಗಂಗೆ ಗದ್ಯಾಣ 3, ಹೂದೋಟದ ತೋಟಿಗರಿಗೆ ಗದ್ಯಾಣ 3, ಮಾಲೆಗಾರಂಗೆ ಗದ್ಯಾಣ 3, ದವಸಿಗರಿಗೆ ಗದ್ಯಾಣ 9, ಅಂಗರಿಕಂಗೆ ಗದ್ಯಾಣ 3, ಕುಂಬಾರಂಗೆ ಗದ್ಯಾಣ 1, ದೇವರಾರತಿಯ ದೇವದಾಸಿಯರಿಗೆ ಗದ್ಯಾಣ 3" ಹಾಗೆಯೇ ಸತ್ರದಲ್ಲಿ ಹತ್ತುಜನರ ಭೋಜನಕ್ಕಾಗಿ ವರ್ಷಕ್ಕೆ ಬೇಕಾದ ಆಹಾರಸಾಮಾಗ್ರಿಗಳಿಗೆ ನೀಡಿದುದು ಸಹ ಇದೆ, "ವುಪ್ಪು ಮಾನ 1 ದರ ಲೆಕ್ಕದೆ ಪಣ 4 ಮೆಳಸು ಸೊಲ್ಲಗೆಯ ಲೆಕ್ಕದೆ ಪಣ 6 ಎಣ್ಣೆ ಯಿಂಮಾನರೆಯ ಲೆಕ್ಕದೆ ಗದ್ಯಾಣ 2 ಆ ತೊಗರಿಯ ಬೇಳೆ ಬಳ್ಳ 1 ಮಾನ 1 ದರ ಲೆಕ್ಕದೆ ಗದ್ಯಾಣ 1 ಸತ್ರದ ಬಾಣಸಿಗಂಗೆ ಗದ್ಯಾಣ 3 ದೇವಾಲ್ಯಕಂ ಸತ್ರಕ್ಕಂ ನಡವಧ್ಯಕ್ಷದವೆಂಗೆ

[10] ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-7, ಶಾಸನ ಸಂಖ್ಯೆ-56, ಪುಟ ಸಂಖ್ಯೆ-284
[11] ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-7, ಶಾಸನ ಸಂಖ್ಯೆ-30, ಪುಟ ಸಂಖ್ಯೆ-271

ಗದ್ಯಾಣ 3 ದೇವರ ಭೋಗದ ನಾಗವಾಸದ ಜೀವಿತ ಗದ್ಯಾಣ 30" ಇತ್ಯಾದಿಯಾಗಿ ನೀಡಲಾಗಿದೆ.

ಕೆಲವು ಸಂದರ್ಭಗಳಲ್ಲಿ ಆರ್ಥಿಕ ಮತ್ತು ಸಾಮಾಜಿಕವಾದ ಮಹತ್ತರವಾದ ಅಂಶಗಳು ಕಂಡುಬರುತ್ತವೆ. ಸಮಾಜದಲ್ಲಿ ಅವಿಭಕ್ತ ಕುಂಟುಂಬಗಳು ಇದ್ದು ಆ ಕಾಲದಲ್ಲಿಯೂ ಮಕ್ಕಳಿಗೂ ಆಸ್ತಿಗಳು ವಿಭಜನೆಯಾಗಿರುವುದನ್ನು ಗಮನಿಸಬಹುದು. ಪ್ರಾಚೀನ ಕಾಲದಲ್ಲಿ ಹಲವಾರು ರಾಜರುಗಳು ಧರ್ಮಸಹಿಷ್ಣುಗಳಾಗಿದ್ದರು, ಇವರುಗಳು ನ್ಯಾಯ ತೀರ್ಮಾನ ಸಂದರ್ಭದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದ್ದರು, ವಿವಾದಗಳು ಉಂಟಾದಾಗ ಅವುಗಳ ಇತ್ಯರ್ಥ ಮಾಡುವ ಹಾಗೂ ನ್ಯಾಯ ತೀರ್ಮಾನ ಕೈಗೊಳ್ಳುಗ ಸಂದರ್ಭ ಬಂದಾಗ ಸಾಕ್ಷಿದಾರರನ್ನು ಪರೀಕ್ಷೆಗೆ ಒಡ್ಡುತ್ತಿದ್ದರು ಹಾಗೇಯೆ ಕಕ್ಷಿದಾರರೂ ಸಹ ಕೆಲವೊಂದು ಪ್ರಕರಣಗಳಲ್ಲಿ ನ್ಯಾಯ ನಿರ್ಣಯ ತೆಗೆದುಕೊಳ್ಳಲು ಅನುವಾಗುವಂತಹ ಪ್ರಸಂಗಗಳಲ್ಲಿ ತನ್ನ ನಿಲುವುಗಳನ್ನು ಸಾಬೀತುಪಡಿಸುವ ಸಂದರ್ಭದಲ್ಲಿ ಸತ್ಯಾಸತ್ಯೆತೆಯನ್ನು ಕಂಡುಹಿಡಿಯಲು 'ದಿವ್ಯ' ಪದ್ಧತಿಗನುಗುಣವಾಗಿ ತೀರ್ಮಾನಿಸಲಾಗುತಿತ್ತು.

ಇಂತಹ ಪ್ರಸಂಗವನ್ನು ದೊಡ್ಡಗರುಡನಹಳ್ಳಿಯ ಕ್ರಿ.ಶ.1257ರ [12] ಶಾಸನವೊಂದರಲ್ಲಿ ಕಾಡುವಿಟ್ಟಿಯೊಡನೆ ಯುದ್ಧದಲ್ಲಿ ಹೋರಾಡಿದ ವೀರನೊಬ್ಬನಿಗೆ ಹೊಯ್ಸಳ ಅರಸ ಗರುಡನಹಳ್ಳಿಯಲ್ಲಿ ಭೂಮಿದಾನ ಮಾಡಿದ ಆದರೆ ಮುರುಡಿಪುರದ ಜನರು ತಾಮ್ರಶಾಸನವೊಂದನ್ನು ತೋರಿಸಿ ಆ ಭೂಮಿ ತನ್ನದೆಂದು ವಾದಿಸಿ, ಈ ಭಾಗದಲ್ಲಿ ನೆಟ್ಟಿರುವ ಗಡಿಕಲ್ಲುಗಳು ಬಲಾತ್ಕಾರವಾಗಿ ನೆಡಲಾಗಿದೆಯೆಂದು ಅರಸನಿಗೆ ದೂರಿತ್ತರು ಆಗ ಗರುಡನಹಳ್ಳಿಯ ಕನ್ನೆಯ್ಯ ಎಂಬ ವ್ಯಕ್ತಿ ಆ ಭೂಮಿ ತನಗೆ ಸೇರಿದುದೆಂದು ಹೇಳಿ ವಿವಾದದ ಬಗ್ಗೆ 'ಸ್ಥಿರಪತ್ರ' ಬರೆಸಿ ಹೊಯ್ಸಳ ಅರಸ ಮುಮ್ಮಡಿ ವೀರನರಸಿಂಹ ಸ್ವತಃ ತಾನೇ ವಿಚಾರಣೆ ನಡೆಸಲು ಮುಂದಾದಾಗ ಗರಡನಹಳ್ಳಿಯ ಕನ್ನಯನು 'ದಿವ್ಯ' ಹಿಡಿದು ಗೆದ್ದನೆಂದು ತಿಳಿಸುತ್ತದೆ.

ಆಗ ನ್ಯಾಯತೀರ್ಮಾನ ಕನ್ನಯನ ಹಾಗೂ ಗರಡನಹಳ್ಳಿಯ ಪರವಾಗಿ ನಿರ್ಣಯವಾಗುವುದೇ ಅಲ್ಲದೇ ಆತನಿಗೆ ಭೂಮಿಯನ್ನು ದತ್ತಿಯಾಗಿ ನೀಡಲಾಗಿದೆ. ಪ್ರಸ್ತುತವಾಗಿ ಈ ಭಾಗಗಳು ಬಯಲುಸೀಮೆಗಳಾಗಿವೆ ಆದರೂ ಸಹ ಅಂದಿನ ದಿನಗಳಲ್ಲಿ ಮರಗಳಿಂದ ಈ ಭಾಗಗಳು ಕೂಡಿದಂತಹ ಉಲ್ಲೇಖಗಳಿವೆ. ಹಾಗೇಯೆ ಈ ಶಾಸನವನ್ನು 'ಜಯಪತ್ರ ಶಾಸನ' ಎಂದು ವರ್ಣಿಸಲಾಗಿದೆ. ಈ ಪ್ರಕರಣದಲ್ಲಿ ತನ್ನ ಗ್ರಾಮದ ಪರವಾಗಿ

[12] ಎಪಿಗ್ರಾಫಿಯ ಕರ್ನಾಟಿಕ, ಸಂಪುಟ–7, ಶಾಸನ ಸಂಖ್ಯೆ–27, ಪುಟ ಸಂಖ್ಯೆ–269

ದಿವ್ಯ ಪರೀಕ್ಷೆಗೆ ತನ್ನನ್ನೇ ಈಡು ಮಾಡಿಕೊಂಡ ಕನ್ನಯ್ಯನ ನಿಲುವು ವ್ಯಕ್ತಿ ಹಾಗೂ ವೈಯುಕ್ತಿಕ ಹಿತಕ್ಕಿಂತ ಗ್ರಾಮದ ಗೆಲುವುಗಾಗಿ ಪಣವೊಡ್ಡಿದ್ದು ಉತ್ತಮ ನಿದರ್ಶನವಾಗಿದೆ.

ಇದನ್ನು ಗಮನಿಸಿದರೆ ನ್ಯಾಯತೀರ್ಮಾನದ ಸಂದರ್ಭದಲ್ಲಿ ದೇವರು, ಧರ್ಮ, ಅಗ್ನಿದಿವ್ಯ ಪರೀಕ್ಷೆಗಳ ಮೂಲಕ ನ್ಯಾಯಾಡಳಿತಕ್ಕೆ ಹೆಚ್ಚಿನ ಗಮನ ನೀಡುತ್ತಿದ್ದರು. ಇದೇ ರೀತಿಯ ದಿವ್ಯದ ಪ್ರಯೋಗದ ಮೂಲಕ ಗುತ್ತಲಿನ ಶಾಸನದಲ್ಲಿ ಉಲ್ಲೇಖವಾಗಿದೆ. ಕ್ರಿ.ಸ. 1654ರ [13] ಶಾಸನದಲ್ಲಿ ದೇವರ ಮತ್ತು ದೇವಾಲಯದ ಪೂಜಾರಿಕೆಯ ಹಕ್ಕನ್ನು ಯಾರಿಗೆ ಸೇರಿದೆಂದು ತೀರ್ಮಾನಿಸುವಂತಹ ಪ್ರಸಂಗವಾಗಿದೆ.

ಗುತ್ತಲಿನ ಅಕ್ಕಿಗುಪ್ತಿಪುರದ ಬ್ರಾಹ್ಮಣರಿಗೂ ಹಾಗೂ ಕೆಂಪು ಅಕ್ಕಿವೊಡೆಯರಿಗೂ ಪೂಜಾರಿಕೆಯ ಹಕ್ಕು ತಮಗೆ ಸಿಗಬೇಕೆಂಬ ವ್ಯಾಜ್ಯ ತಲೆದೂರಿತು. ಆ ಭಾಗದ ಪಾಳೇಗಾರ ಶಿವೋಜಿನಾಯಕ ಹಾಗೂ ವೆಂಕಟಪ್ಪನಾಯಕರ ಮುಂದೆ ದೂರು ಸಲ್ಲಿಸಲಾಗಿತ್ತು. ಈ ವಿವಾದ ಬಗೆಹರಿಸಲು ಮಹಾನಾಡಿನವರು, ಶಾನುಭೋಗರು ಹಾಗೂ ಹಲವು ಪ್ರಮುಖ ವ್ಯಕ್ತಿಗಳು ಸೇರಿ ವ್ಯಾಜ್ಯ ಬಗೆಹರಿಸಲು ಕುದಿಯುವ ತುಪ್ಪದಲ್ಲಿ ಕೈಯನ್ನು ಅದ್ದುವ ದಿವ್ಯಪರೀಕ್ಷೆಯನ್ನು ನಡೆಸುವುದರ ಮೂಲಕ ತೀರ್ಮಾನಿಸಿದರು ಆಗ ಅಕ್ಕಿವೊಡೆಯನು ಮೂರು ಬಾರಿ ಕುದಿಯುವ ತುಪ್ಪದಲ್ಲಿ ಕೈಯನ್ನು ಅದ್ದಿ ಜಯಶೀಲನಾಗುತ್ತಾನೆ ಅನಂತರ ದೇವಾಲಯಗಳ ಆಸ್ತಿಯನ್ನು ನೋಡಿಕೊಳ್ಳಲು ಮತ್ತು ಪೂಜಾರಿಕೆಯ ಹಕ್ಕನ್ನು ಅಕ್ಕಿವೊಡೆಯನಿಗೆ ನೀಡಲಾಯಿತು.

ಕ್ರಿ.ಶ.1276ರ [14] ಹೊಸಬೂದನೂರಿನ ಶಾಸನವೊಂದರಲ್ಲಿ ಬೂದನೂರಿನ ಮಹಾಜನರು 'ಮರಕಾಡು ನಗದೆಬೆದಲಾದ ಭೂಮಿಯೊಳಗೆ ತೆಂಗು ಕವುಂಗು ಮುಖ್ಯವಾದ ಸಮಸ್ತ ಸ್ಥಾವರ ಫಲವೃಕ್ಷಗಳನ್ನೂ ಯಿಕ್ಕಿಕೊಂಡು' ಕೆರೆಯ ಕಟ್ಟಿಕೊಂಡು ಕಾಲುವೆ ತಂದುಕೊಂಡು ಇದ್ದರೆಂದು ಉಲ್ಲೇಖಿಸುತ್ತದೆ.

ಈ ಮೇಲೆ ತಿಳಿಸಿದ ಎಲ್ಲಾ ಅಂಶಗಳನ್ನು ಗಮನಿಸಿದ್ದಾಗ ಮಂಡ್ಯ ತಾಲ್ಲೂಕಿನ ಶಾಸನಗಳಲ್ಲಿ ಕಂಡು ಬರುವ ಮಾಹಿತಿಗಳನ್ನು ಆಧರಿಸಿ ಆ ಪ್ರದೇಶದ ಜನರ ಜೀವನ ಆಗುಹೋಗುಗಳು ಬದುಕಿನ ರೀತಿ ಕಟ್ಟಿದ ಕಲೆ ಮತ್ತು ಆರ್ಥಿಕವಾಗಿ, ಸಮಾಜಿಕವಾಗಿ ಹಾಗು ಸಾಂಸ್ಕೃತಿಕವಾಗಿ ತನ್ನದೆಯಾದ ಹಿರಿಮೆಯನ್ನು ಮೈಗೂಡಿಸಿ ಕೊಂಡು ಇತಿಹಾಸ ರಚಿಸುವಲ್ಲಿ ಸಹಾಯವಾಗಿದೆ.

---

[13] ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-7, ಶಾಸನ ಸಂಖ್ಯೆ-63, ಪುಟ ಸಂಖ್ಯೆ-287

[14] ಎಪಿಗ್ರಾಫಿಯ ಕರ್ನಾಟಿಕ, ಸಂಪುಟ-7, ಶಾಸನ ಸಂಖ್ಯೆ-56, ಪುಟ ಸಂಖ್ಯೆ-284